ಶ್ರೀ ಗೂಳಿಹಟ್ಟಿ ಡಿ. ಶೇಖರ್ : ತಾವು ಖಂಡಿತವಾಗಿ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ, ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಈ ತರಹ ಉತ್ತರ ಹೇಳುವುದಾದರೆ, ನಾವು question ಕೇಳಿ ಏನೂ ಪ್ರಯೋಜನವಿಲ್ಲ.

ಅಧ್ಯಕ್ಷರು : ಮಾನ್ಯ ಕರಡಿ ಸಂಗಣ್ಣನವರೇ, ತಾವೇನು ಪ್ರಶ್ನೆ ಕೇಳಿದ್ದೀರೋ, ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಹೇಳಿದ್ದಾರೆ. ನೀವು additional ಆಗಿ ಕೇಳಿದ್ದಕ್ಕೂ ಅವರು ಉತ್ತರ ಹೇಳಿದ್ದಾರೆ. ಆದ್ದರಿಂದ ನಾವು next ಪ್ರಶ್ನೆಗೆ ಹೋಗೋಣ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರು ನಮ್ಮ ನೆರವಿಗೆ ಬರಬೇಕು.

ಅಧ್ಯಕ್ಷರು : ನೀವು additional ಆಗಿ ಕೆಲವೊಂದು ಬೇಕು ಎಂದು ಕೇಳಿದ್ದೀರಿ. ಅದರ ಬಗ್ಗೆ ನಾನು ವಿಚಾರ ಮಾಡುತ್ತೇನೆಂದು ಮಾನ್ಯ ಸಚಿವರು ಹೇಳಿದ್ದಾರೆ. ಅದಕ್ಕಿಂತ ಇನ್ನೇನು ಬೇಕು? ಈಗಲೇ ಅದನ್ನು sanction ಮಾಡುತ್ತೇನೆಂದು ಹೇಳಲಿಕ್ಕಾಗುತ್ತದೆಯೇ? ಅನುಭವಿ ಶಾಸಕರಾದ ತಾವು ಈ ರೀತಿ ಮಾಡಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಮುಂದಿನ ಪ್ರಶ್ನೆ ಮಾನ್ಯ ಜಯಚಂದ್ರರವರದು. ಅದನ್ನು ತಡೆಹಿಡಿಯಲಾಗಿದೆ. ಮಾನ್ಯ ಸಚಿವರು ಮುಂದೆ ಅದನ್ನು ತೆಗೆದುಕೊಳ್ಳಲು ವಿನಂತಿ ಮಾಡಿದ್ದಾರೆ. ಮುಂದೆ ಅದನ್ನು ತೆಗೆದುಕೊಳ್ಳುತ್ತೇನೆ.

ತಮಿಳುನಾಡು ಸರ್ಕಾರವು ಹೊಗೇನಕಲ್‌ನಲ್ಲಿ
ಕುಡಿಯುವ ನೀರಿನ ಯೋಜನೆಯನ್ನು ಜಾರಿ ಮಾಡುತ್ತಿರುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 3 : (30)

ಸದಸ್ಯರ ಹೆಸರು : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್)

ಉತ್ತರಿಸುವ ಸಚಿವರು : ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)

ಕ್ರ.ಸಂ.	ಪ್ರಶ್ನೆ	ಉತ್ತರಗಳು
ಅ	ತಮಿಳುನಾಡು ಸರ್ಕಾರವು ಇತ್ತೀಚೆಗೆ ಹೊಗೇನಕಲ್‌ನಲ್ಲಿ ಆರಂಭಿಸಿರುವ ಕುಡಿಯುವ ನೀರಿನ ಯೋಜನೆ ಮತ್ತು ಜಲವಿದ್ಯುತ್ ಯೋಜನೆಯ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಈ	ತಮಿಳುನಾಡು ಸರ್ಕಾರವು ಹೊಗೇನಕಲ್ ಬಳಿ ಪ್ರಾರಂಭಿಸಿರುವ ಕುಡಿಯುವ ನೀರಿನ ಯೋಜನೆಯ ವಿಷಯವು ರಾಜ್ಯ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸದರಿ ಯೋಜನೆಯ ಬಗ್ಗೆ ಕೆಲ ಸ್ಪಷ್ಟೀಕರಣಗಳನ್ನು ರಾಜ್ಯ ಸರ್ಕಾರವು ತಮಿಳುನಾಡು ಸರ್ಕಾರದಿಂದ ಕೇಳಿದೆ ಹಾಗೂ ಕೇಂದ್ರ ಸರ್ಕಾರದ ಗಮನವನ್ನು ಸಹ ಸೆಳೆಯಲಾಗಿದೆ.

	ವಿಷಯದ ಬಗ್ಗೆ ಸರ್ಕಾರದ ನಿಲುವೇನು?	ಸದರಿ ಯೋಜನೆಗೆ ಸಂಬಂಧಪಟ್ಟ ಅಂತರ ರಾಜ್ಯ ಅಂಶಗಳು ಇತ್ಯರ್ಥವಾಗುವವರೆಗೂ ಯೋಜನೆಯನ್ನು ಮುಂದುವರೆ ಸದಂತೆ ತಮಿಳುನಾಡು ರಾಜ್ಯವನ್ನು ರಾಜ್ಯ ಸರ್ಕಾರವು ಒತ್ತಾಯಿಸಿರುತ್ತದೆ. ರಾಷ್ಟ್ರೀಯ ಜಲ ವಿದ್ಯುತ್ ನಿಗಮದ (ಕೇಂದ್ರ ಸರ್ಕಾರದ ಸ್ವಾಮ್ಯ ಸಂಸ್ಥೆ) ವತಿಯಿಂದ ಕಾವೇರಿ ನದಿಯ ಮೇಲೆ ಇತರೆ ಜಲ ವಿದ್ಯುತ್ ಯೋಜನೆಗಳೊಂದಿಗೆ ಹೊಗೇನಕಲ್ ಜಲ ವಿದ್ಯುತ್ ಯೋಜನೆಯನ್ನು ತೆಗೆದುಕೊಳ್ಳುವ ಬಗ್ಗೆ ಕೇಂದ್ರ ಸರ್ಕಾರ ಮತ್ತು ತಮಿಳುನಾಡು ರಾಜ್ಯದ ಜೊತೆ ಮಾತುಕತೆ ನಡೆದಿತ್ತು. ಆದರೆ ಸಾಮಾನ್ಯ ಒಪ್ಪಂದ ಏರ್ಪಡದ ಕಾರಣ, ರಾಷ್ಟ್ರೀಯ ಜಲ ವಿದ್ಯುತ್ ನಿಗಮವು ಸದರಿ ಯೋಜನೆಯನ್ನು ತೆಗೆದುಕೊಂಡಿರುವುದಿಲ್ಲ.
ಆ	ಕಾವೇರಿ ನದಿ ನೀರಿನ ಪ್ರಾಧಿಕಾರವು ನೀರಿನ ಹಂಚಿಕೆಯ ಬಗ್ಗೆ ನೀಡಿರುವ ಅಂತಿಮ ತೀರ್ಪಿನ ಬಗ್ಗೆ ಸ್ಪಷ್ಟೀಕರಣ ಕೋರಿ ರಾಜ್ಯ ಸರ್ಕಾರವು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಅರ್ಜಿಯು ಇತ್ಯರ್ಥವಾಗುವ ಮೊದಲೇ ತಮಿಳುನಾಡು ಸರ್ಕಾರ ಮೇಲ್ಕಂಡ ಕ್ರಮದಿಂದಾಗಿ ರಾಜ್ಯದ ರೈತರ ಹಿತಾಸಕ್ತಿಗೆ ಧಕ್ಕೆಯಾಗುವುದಿಲ್ಲವೇ;	ತಮಿಳುನಾಡು ಸರ್ಕಾರವು ಕೈಗೊಂಡಿರುವ ಕುಡಿಯುವ ನೀರಿನ ಯೋಜನೆಗೆ 1.4 ಟಿ.ಎಂ.ಸಿ. ನೀರನ್ನು ಉಪಯೋಗಿಸಲು ಕೇಂದ್ರ ಸರ್ಕಾರವು ಅಭ್ಯಂತರವಿಲ್ಲವೆಂದು ಹಾಗೂ ಸದರಿ ಯೋಜನೆಗೆ ಬಳಸುವ ನೀರು ಕಾವೇರಿ ನ್ಯಾಯಾಧಿಕರಣವು ಮಧ್ಯಂತರ ಆದೇಶದಲ್ಲಿ ಮಾಡಿರುವ ನೀರಿನ ಪಾಲಿನಲ್ಲಿ ಅಥವಾ ನ್ಯಾಯಾಧಿಕರಣವು ಅಂತಿಮ ಆದೇಶದಲ್ಲಿ ತಮಿಳುನಾಡು ಸರ್ಕಾರಕ್ಕೆ ಮಾಡುವ ನೀರಿನ ಹಂಚಿಕೆ ಪ್ರಮಾಣದೊಳಗೆ ಮಾಡಬೇಕು ಮತ್ತು ಆ ಆದೇಶಗಳ ತೀರ್ಪಿನ ನಿಬಂಧನೆಗಳೊಳಗೆ ಒಳಪಟ್ಟಿರಬೇಕೆಂದು ದಿನಾಂಕ : 21-09-1998 ರ ಕೇಂದ್ರ ಸರ್ಕಾರದ ಪತ್ರದಲ್ಲಿ ತಿಳಿಸಿರುತ್ತದೆ.
ಇ	ಹಾಗಿದ್ದಲ್ಲಿ, ಸರ್ಕಾರ ಇದುವರೆಗೂ ಈ ಸಂಬಂಧವಾಗಿ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ (ಪೂರ್ಣ ವಿವರಗಳನ್ನು ಒದಗಿಸುವುದು)	ಸದರಿ ಯೋಜನೆಯ ಬಗ್ಗೆ ಪತ್ರಿಕಾ ವರದಿಗಳಲ್ಲಿ ಪ್ರಕಟವಾದ ಕೂಡಲೇ ಜಲ ಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಗಳು ದಿನಾಂಕ 14-2-2008 ರ ಪತ್ರದಲ್ಲಿ ತಮಿಳುನಾಡು ರಾಜ್ಯದ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ

		ಗಳಿಗೆ ಕಾವೇರಿ ಜಲ ವಿವಾದ ನ್ಯಾಯಾಧೀಕರಣದ ಅಂತಿಮ ಆದೇಶವು ಸರ್ವೋಚ್ಚ ನ್ಯಾಯಾಲಯ ಹಾಗೂ ನ್ಯಾಯಾಧೀಕರಣದಲ್ಲಿ ಪ್ರಶ್ನಿಸಿರುವ ಹಿನ್ನೆಲೆಯಲ್ಲಿ ಯೋಜನೆಯನ್ನು ತೆಗೆದುಕೊಳ್ಳದಂತೆ ಕೋರಿದ್ದಾರೆ. ಜಲ ಸಂಪನ್ಮೂಲ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ತಮಿಳುನಾಡು ಸರ್ಕಾರದ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗಳಿಗೆ ಬರೆದಿರುವ ದಿನಾಂಕ : 27-02-2008 ರ ಪತ್ರದಲ್ಲಿ ಸದರಿ ಯೋಜನೆಯಿಂದ ಆಗುವ ಅಂತರ ರಾಜ್ಯ ಪರಿಣಾಮಗಳನ್ನು ಪರಿಶೀಲಿಸಲು ಯೋಜನಾ ವರದಿಯ ಪ್ರತಿಯನ್ನು ಕಳುಹಿಸಿಕೊಡುವಂತೆ ಕೋರಿರುತ್ತಾರೆ. ರಾಜ್ಯದ ಮುಖ್ಯ ಕಾರ್ಯದರ್ಶಿಗಳು ದಿನಾಂಕ :28-2-2008 ರ ಪತ್ರದಲ್ಲಿ ತಮಿಳುನಾಡು ರಾಜ್ಯದ ಮುಖ್ಯ ಕಾರ್ಯದರ್ಶಿಗಳನ್ನು ಹೊಗೇನಕಲ್ ಕುಡಿಯುವ ನೀರಿನ ಯೋಜನೆಯನ್ನು ಮುಂದುವರೆಸದಂತೆ ಕೋರಿರುತ್ತಾರೆ. ತಮಿಳುನಾಡು ರಾಜ್ಯದ ಮುಖ್ಯ ಕಾರ್ಯದರ್ಶಿಗಳಿಗೆ ದಿನಾಂಕ 27-03-2008 ರಂದು ರಾಜ್ಯದ ಮುಖ್ಯ ಕಾರ್ಯದರ್ಶಿಗಳು ಬರೆದಿರುವ ಪತ್ರದಲ್ಲಿ ಸದರಿ ಯೋಜನೆಯ ಪ್ರಸ್ತಾಪವನ್ನು ಕಾವೇರಿ ನ್ಯಾಯಾಧೀಕರಣದ ಮುಂದೆ ತಮಿಳುನಾಡು ರಾಜ್ಯವು ಪ್ರಸ್ತಾಪಿಸಿಲ್ಲದಿರುವುದರಿಂದ, ಈ ಯೋಜನೆಗೆ ಕೇಂದ್ರ ಸರ್ಕಾರವು ನೀಡಿರುವ ನಿರಪೇಕ್ಷಣಾ ಪತ್ರವನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿ, ಯೋಜನೆಯನ್ನು ಮುಂದುವರೆಸದಂತೆ ಕೋರಲಾಗಿದೆ. ತಮಿಳುನಾಡು ರಾಜ್ಯದ ಮುಖ್ಯ ಕಾರ್ಯದರ್ಶಿಗಳಿಗೆ ದಿನಾಂಕ 24-05-2008 ರಂದು ರಾಜ್ಯದ ಮುಖ್ಯ ಕಾರ್ಯದರ್ಶಿಗಳು ಬರೆದಿರುವ ಪತ್ರದಲ್ಲಿ ತಮಿಳುನಾಡು ರಾಜ್ಯವು ಕೈಗೊಂಡಿರುವ ಯೋಜನೆಯಿಂದ, ಕರ್ನಾಟಕ ರಾಜ್ಯದ ಹಿತಾಸಕ್ತಿಗೆ ಧಕ್ಕೆಯಾಗುವುದಿಲ್ಲವೆಂದು ರಾಜ್ಯಕ್ಕೆ

		ಮನವರಿಕೆ ಮಾಡಿಕೊಳ್ಳುವ ಜವಾಬ್ದಾರಿ ಆ ರಾಜ್ಯಕ್ಕೆ ಇರುವುದರಿಂದ, ಯೋಜನೆಯ ವಿವರಗಳನ್ನು ಕರ್ನಾಟಕ ರಾಜ್ಯಕ್ಕೆ ಒದಗಿಸುವಂತೆ ಕೋರಲಾಗಿದೆ. ಮುಂದುವರೆದು ಯೋಜನೆ ಮುಂದುವರೆಸದಂತೆ ಸಹ ಕೋರಲಾಗಿದೆ.
ಈ	ಈ ವಿಷಯದ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ರಾಜ್ಯದಿಂದ ಕೇಂದ್ರಕ್ಕೆ ಸರ್ವಪಕ್ಷ ನಿಯೋಗವನ್ನು ಕೊಂಡೊಯ್ಯುವ ವಿಚಾರ ಸರ್ಕಾರದ ಮುಂದಿದೆಯೆ?	ರಾಜ್ಯದ ಹಿತಾಸಕ್ತಿ ಕಾಪಾಡಲು ಅವಶ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು.
ಉ	ರಾಜ್ಯದ ಮುಂದಿರುವ ಜಲ ವಿವಾದಗಳನ್ನು ಸೌಹಾರ್ದಯುತವಾಗಿ ಬಗೆಹರಿಸಲು (ಕಳಸಾ ಬಂಡೂರಿ ಕುಡಿಯುವ ನೀರಿನ ಯೋಜನೆಯು ಸೇರಿದಂತೆ) ಸರ್ಕಾರದ ಮುಂದಿರುವ ಕ್ರಮಗಳೇನು?	ಅಂತರ ರಾಜ್ಯ ಜಲ ವಿವಾದಗಳ ವಿಚಾರದಲ್ಲಿ ಕರ್ನಾಟಕ ರಾಜ್ಯವು ಇದುವರೆವಿಗೂ ಇತರ ಕಣಿವೆ ರಾಜ್ಯಗಳೊಡನೆ ಎಲ್ಲಾ ಕಾಲದಲ್ಲಿಯೂ ಪರಸ್ಪರ ಮಾತುಕತೆಯ ಮೂಲಕ ವಿವಾದಗಳನ್ನು ಪರಿಹರಿಸಿಕೊಳ್ಳಲು ಪ್ರಯತ್ನಿಸಿದೆ. ಅನಿವಾರ್ಯ ಸಂದರ್ಭಗಳಲ್ಲಿ ನ್ಯಾಯಾಧೀಕರಣ / ಸರ್ವೋಚ್ಚ ನ್ಯಾಯಾಲಯದ ಮುಂದೆ ಇರುವ ವಿವಾದಗಳ ಪ್ರಕರಣಗಳಲ್ಲಿ ರಾಜ್ಯದ ನೀರಿನ ಪಾಲನ್ನು ಪಡೆಯಲು ಹಾಗೂ ರಾಜ್ಯದ ಹಿತಾಸಕ್ತಿ ಕಾಪಾಡಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಈಗ ಜಲ ಸಂಪನ್ಮೂಲ ಸಚಿವರಾದ ಮಾನ್ಯ ಬೊಮ್ಮಾಯಿಯವರು ಮತ್ತು ಮಾನ್ಯ ಈಶ್ವರಪ್ಪನವರು, ಇಬ್ಬರೂ ದಿನಾಂಕ 29-02-2008 ರಲ್ಲಿ ಜಂಟಿ ಪತ್ರಿಕಾ ಹೇಳಿಕೆಯನ್ನು ನೀಡಿದ್ದಾರೆ. ಹೊಗೆನಕಲ್ ಯೋಜನೆಯನ್ನು ಯಾವಾಗ ನಿಲ್ಲಿಸುತ್ತೀರಿ? ಕಾಂಗ್ರೆಸ್‌ನವರು ಏನು ಮಾಡುತ್ತಿದ್ದಾರೆ? ಕಾಂಗ್ರೆಸ್‌ನವರಿಗೆ ಏನು ಕೆಲಸವಿದೆ ಎಂಬ ಪ್ರಶ್ನೆಯನ್ನು ಅವರು ಕೇಳಿದ್ದಾರೆ. ಬಹಳ ಉದ್ದವಾದ ಪ್ರಶ್ನೆಗಳನ್ನು ಕೇಳಬಾರದು ಎಂದು ಮಾನ್ಯ ಅಧ್ಯಕ್ಷರು ಸೂಚಿಸಿರುವುದರಿಂದಾಗಿ, ಇದನ್ನು simple ಆಗಿ ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು : ವಿಷಯಕ್ಕೆ ಸಂಬಂಧಪಟ್ಟಂತೆ ಕೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ವಿಷಯಕ್ಕೆ ಸಂಬಂಧಪಟ್ಟಂತೆ ಕೇಳುತ್ತಿದ್ದೇನೆ, ಇದು ಬಹಳ ಮಹತ್ವದ ಪ್ರಶ್ನೆಯಾಗಿದೆ, ಅದಕ್ಕಾಗಿ ಕೇಳುತ್ತಿದ್ದೇನೆ. ಮಾನ್ಯ ಈಶ್ವರಪ್ಪನವರು ಮತ್ತು ಮಾನ್ಯ ಜಲಸಂಪನ್ಮೂಲ ಸಚಿವರು ವಿಧಾನಪರಿಷತ್ತಿನ ಸದಸ್ಯರಿದ್ದಾಗ ಜಂಟಿ ಪತ್ರಿಕಾ ಹೇಳಿಕೆಯಲ್ಲಿ, ಈ ಕಾಂಗ್ರೆಸ್‌ನವರು ಏನು ಮಾಡುತ್ತಿದ್ದಾರೆ, ರಾಜ್ಯಪಾಲರು ಬರೀ ವರ್ಗಾವಣೆಯಲ್ಲಿ ಕಾಲ ಕಳೆಯುತ್ತಿದ್ದಾರೆ, ಕೇಂದ್ರ ಸರ್ಕಾರದವರು ಅನುಮತಿಯನ್ನು ಏಕೆ ಕೊಟ್ಟರು ಎಂದು ಇವೆಲ್ಲವನ್ನು ಕೇಳಿದ್ದಾರೆ, ಅದು ಆ ಪತ್ರಿಕೆಯಲ್ಲಿ ಬಂದಿದೆ. ಆಮೇಲೆ ಇವರೆಲ್ಲಾ ಕೇಳಿದರೂ ಕೂಡಾ ದಿ. 26-4-2008 ರಂದು ಅವರು ಶಿಲಾನ್ಯಾಸವನ್ನು ಮಾಡಿಕೊಂಡುಬಿಟ್ಟಿದ್ದಾರೆ. ಏಕೆಂದರೆ ಹೊಗೇನಕಲ್‌ಗೆ ಹೋಗುವುದಕ್ಕಾಗುವುದಿಲ್ಲ, ನಮ್ಮ ಧರ್ಮಪುರಿಯಲ್ಲೇ ಮಾಡಬೇಕೆಂದು ಅಲ್ಲೇ ಕರುಣಾನಿಧಿಯವರು ಶಿಲಾನ್ಯಾಸವನ್ನು ಮಾಡಿಕೊಂಡುಬಿಟ್ಟಿದ್ದಾರೆ. ನಾವು ಕೇಂದ್ರಕ್ಕೆ ಪತ್ರ ಬರೆದು ನಿಲ್ಲಿಸಿ ಎಂದು ಹೇಳಿದ್ದೇವೆ, ಕೇಂದ್ರ ಸರ್ಕಾರದವರು ಏಕೆ ಅನುಮತಿಯನ್ನು ಕೊಡಬೇಕಾಗಿತ್ತು ಎಂದು ಇದೆಲ್ಲವನ್ನು ಕೇಳಿದ್ದಾರೆ. ಈಗ ಕೇಂದ್ರ ಸರ್ಕಾರದ ಸಚಿವರಾದ ಟಿ.ಆರ್. ಬಾಲುರವರು, ಪ್ರಜಾವಾಣಿ ಪತ್ರಿಕೆಯಲ್ಲಿ ದಿನಾಂಕ 3-4-2008 ರಂದು ಒಂದು ಹೇಳಿಕೆಯನ್ನು ನೀಡಿದ್ದಾರೆ. 1998 ರಲ್ಲಿ, ಕೇಂದ್ರದಲ್ಲಿ ಎನ್.ಡಿ.ಎ. ಸರಕಾರವಿದ್ದಾಗ 1.4 ಟಿಎಂಸಿ ಕುಡಿಯುವ ನೀರಿನ ಸಲುವಾಗಿ ಇದಕ್ಕೆ ಅನುಮತಿಯನ್ನು ಕೊಟ್ಟಿದೆ. ಅಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಮಾಡುತ್ತಿದ್ದಾರೆ ಮತ್ತು ವಿದ್ಯುತ್ ಯೋಜನೆಯನ್ನೂ ಮಾಡುತ್ತಿದ್ದಾರೆ. ಈ ಎರಡನ್ನು ಮಾಡಿದರೆ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗುತ್ತದೆ, ಕಾವೇರಿ ಬೇಸಿನ್‌ನಲ್ಲಿ ಬರುವ ರೈತರಿಗೆ ತೊಂದರೆಯಾಗುತ್ತದೆ, ರೈತರೆಲ್ಲಾ ಹಾಳಾಗುತ್ತಾರೆ, ಇದುವರೆಗೆ ಸರ್ಕಾರದ ಮಂತ್ರಿಗಳು ಯಾರಾದರೂ ಅಲ್ಲಿಗೆ ಹೋಗಿ ನೋಡಿದ್ದಾರಾ? ವಿರೋಧ ಪಕ್ಷದಲ್ಲಿದ್ದಾಗ ಅವರು ಕೊಟ್ಟರು, ಮಂತ್ರಿಗಳಾದ ಮೇಲೆ ಇವರು ಹೋಗಿ ನೋಡಿದ್ದಾರಾ? ಮತ್ತೆ ಇವರ್ಯಾರಾದರೂ ಮಂತ್ರಿಗಳು ಅಲ್ಲಿಗೆ ಹೋಗಿ ಪರಿಶೀಲನೆ ಮಾಡಿದ್ದಾರಾ? ನಡೆಯುತ್ತಿರುವ ಕೆಲಸವನ್ನು ನಿಲ್ಲಿಸಿದ್ದಾರಾ? ಇವರು ಪತ್ರ ಬರೆದು, ಇವರು ಬರೆದ ನಂತರ ಕೆಲಸ ನಿಲ್ಲಿಸಿದ್ದಾರೆಂದು ಯಾವ ಗ್ಯಾರಂಟಿ ಇದೆ? ಅದಕ್ಕಾಗಿ ಅದರ ಬಗ್ಗೆ ಬಹಳ ತಾವು ಸವಿಸ್ತಾರವಾಗಿ ಉತ್ತರವನ್ನು ನೀಡಬೇಕೆಂಬುದು ಒಂದು. ಇದನ್ನು ಮಾಡಲಿಲ್ಲವೆಂದರೆ ವಿಧಾನ ಸಭೆಯಲ್ಲಿ ನಾವು ಇದನ್ನು ವಿರೋಧ ಮಾಡುತ್ತೇವೆಂದು

ಸರ್ವಾನುಮತದ ಒಂದು ನಿರ್ಣಯ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುವುದಕ್ಕೆ ತಾವು ತಯಾರಿದ್ದೀರಾ? ಇದೆಲ್ಲದರ ಬಗ್ಗೆ ತಾವು ಸವಿಸ್ತಾರವಾಗಿ ಹೇಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ. ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೇ, ನಾನು ಮತ್ತು ಬಸವರಾಜ ಬೊಮ್ಮಾಯಿಯವರು ಅವರು ಜಂಟಿ ಪತ್ರಿಕಾಗೋಷ್ಠಿ ಮಾಡಿದ್ದು ನಿಜ. ಕೇಂದ್ರ ಸರ್ಕಾರ ಮೊದಲಿನಿಂದಲೂ ಕೂಡ ಕರ್ನಾಟಕಕ್ಕೆ ಅನ್ಯಾಯಗಳನ್ನು ಮಾಡುತ್ತಲೇ ಬಂದಿದೆ. ಕೆಲವು ಬಾರಿ ಮಹಾರಾಷ್ಟ್ರಕ್ಕೆ ಅನುಕೂಲ ಮಾಡುತ್ತಾರೆ, ಕೆಲವು ಬಾರಿ ತಮಿಳುನಾಡಿಗೆ ಅನುಕೂಲ ಮಾಡುತ್ತಾರೆ, ಕೆಲವು ಬಾರಿ ಆಂಧ್ರಕ್ಕೆ, ಕೆಲವು ಸಾರಿ ಗೋವಾ ರಾಜ್ಯಕ್ಕೆ ಅನುಕೂಲ ಮಾಡುತ್ತಾ ಬರುತ್ತಿದ್ದಾರೆ. ಈ ಎಲ್ಲಾ ಸಮಸ್ಯೆಗಳನ್ನು ಕೂಡ ಪರಿಹಾರ ಮಾಡಬೇಕೆಂದು ಈಗಾಗಲೇ ಕೇಂದ್ರಸರ್ಕಾರಕ್ಕೆ ನಮ್ಮ ಸರ್ಕಾರ ಬರುವುದಕ್ಕಿಂತ ಮುಂಚೆ ನಾವೆಲ್ಲಾ ಸಾಕಷ್ಟು ಹೋರಾಟವನ್ನು ಮಾಡಿದ್ದೇವೆ, ತಾವು ಕೂಡಾ ಕಾಂಗ್ರೆಸ್ ಪಕ್ಷದಿಂದ ಹೋಗಿ ಭೇಟಿ ಮಾಡಿಕೊಂಡು ಬಂದಿದ್ದೀರಿ. ಪ್ರಶ್ನೆ ಇರುವುದು, ಈ ಕಾವೇರಿಯ ನ್ಯಾಯಾಧೀಕರಣದ ಅಂತಿಮ ತೀರ್ಪು ಬಂದ ನಂತರ ನಾವು ಕೇಂದ್ರ ಸರ್ಕಾರವನ್ನು ಭೇಟಿ ಮಾಡಲು ಹೋಗಿದ್ದೇವೆ, ಸುಪ್ರೀಂ ಕೋರ್ಟಿಗೂ ಕೂಡ ಹೋಗಿದ್ದೇವೆ. ಸುಪ್ರೀಂ ಕೋರ್ಟಿನಲ್ಲಿ ಈ ಪ್ರಕರಣ ಇರುವ ಸಂದರ್ಭದಲ್ಲಿಯೇ ತಮಿಳುನಾಡಿನವರು ಹೊಗೇನಕಲ್‌ನಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಆರಂಭ ಮಾಡಿದ್ದಾರೆ. ಹೀಗಾಗಿ ನಮ್ಮ ಸರ್ಕಾರ ಬಂದ ನಂತರ, ನಮ್ಮ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳನ್ನೂ ಭೇಟಿ ಮಾಡಿದ್ದಾರೆ, ನಮ್ಮ ನೀರಾವರಿ ಸಚಿವರು ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದಾರೆ, ನಮ್ಮ ಎಲ್ಲಾ ಅಧಿಕಾರಿಗಳು ತಮಿಳುನಾಡಿನ ಸರ್ಕಾರಕ್ಕೂ ಸಾಕಷ್ಟು ಪತ್ರಗಳನ್ನು ಬರೆದಿದ್ದಾರೆ, ಕೇಂದ್ರ ಸರ್ಕಾರಕ್ಕೂ ಸಾಕಷ್ಟು ಪತ್ರವ್ಯವಹಾರವನ್ನು ಮಾಡಿದ್ದಾರೆ. ಇಲ್ಲಿರುವ ಪ್ರಶ್ನೆ, ಈ ಹೊಗೇನಕಲ್ ಯೋಜನೆ ಏನಿದೆ, ಇದನ್ನು ಅವರು ಮಾಡುತ್ತಿರುವುದು ಕಾನೂನು ಬಾಹಿರವಾದ ಅಂಶವನ್ನು ನಾವು ಗಮನಿಸಿ ಕೇಂದ್ರ ಸರ್ಕಾರ ಮತ್ತು ತಮಿಳುನಾಡು ಸರ್ಕಾರದ ಗಮನಕ್ಕೆ ತಂದಿದ್ದೇವೆ, ಸುಪ್ರೀಂ ಕೋರ್ಟಿನಲ್ಲಿ ಈ ವಿಚಾರವಿರುವುದು ತಮ್ಮ ಗಮನಕ್ಕೆ ಬಂದಿದೆ. ಎರಡನೆಯದಾಗಿ, ವಿಧಾನಸಭೆಯಲ್ಲಿ ಸರ್ವಾನುಮತದ ನಿರ್ಣಯ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಬೇಕೆನ್ನುವ ಅಂಶವನ್ನು ಹೇಳಿದ್ದಾರೆ ಮತ್ತೊಂದು ಕಡೆ ಕೇಂದ್ರಕ್ಕೆ ಸರ್ವಪಕ್ಷದ ನಿಯೋಗವನ್ನು ದೆಹಲಿಗೆ ಕರೆದೊಯ್ಯುತ್ತೀರಾ ಎಂದು ಕೇಳಿದ್ದಾರೆ. ಈ ಒಂದು ಯೋಜನೆ ಕರ್ನಾಟಕ ರಾಜ್ಯದ ಪ್ರತಿಷ್ಠೆಯ ಯೋಜನೆ. ಈ ವಿಚಾರದಲ್ಲಿ ಇಡೀ ರಾಜ್ಯದ ಜನ ಒಂದಾಗಿರುವ ಈ ಸಂದರ್ಭದಲ್ಲಿ ಗಡಿ, ನೆಲ, ಜಲ ವಿಚಾರಗಳ ಬಗ್ಗೆ ಯಾವುದೇ ಕಾರಣಕ್ಕೂ ಕರ್ನಾಟಕ ರಾಜ್ಯದಲ್ಲಿ ಪಕ್ಷಾತೀತವಾಗಿ ಹೋರಾಟ ಮಾಡಿಕೊಂಡು ಬಂದಿದ್ದೇವೆ. ಇವತ್ತು ತಾವೇನು ಪ್ರಸ್ತಾಪ ಮಾಡಿದ್ದೀರಿ, ಸರ್ವಪಕ್ಷದ ನಿಯೋಗ ಕರೆದೊಯ್ಯುವುದಿರಬಹುದು, ಸರ್ವಾನುಮತದ ನಿರ್ಣಯವನ್ನು ತೆಗೆದುಕೊಳ್ಳುವುದಿರಬಹುದು, ಯಾವುದು ಈ ರಾಜ್ಯದ ಹಿತದೃಷ್ಟಿಯಿಂದ ಅನುಕೂಲವಾಗುತ್ತದೆ, ಈ ಎಲ್ಲಾ ಅಂಶಗಳ ಬಗ್ಗೆಯೂ ಕೂಡಾ ಕ್ರಮ ತೆಗೆದುಕೊಳ್ಳಲು ನಮ್ಮ ಸರ್ಕಾರ ಸಿದ್ಧವಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಕ್ರಮ ತೆಗೆದುಕೊಳ್ಳುವುದು ಒಂದು, ಅವತ್ತು ಪತ್ರಿಕೆಯಲ್ಲಿ ಹೇಳಿದ ಬಸವರಾಜ ಬೊಮ್ಮಾಯಿ ಅವರು ಅವರೇ ಇವತ್ತು ಜಲಸಂಪನ್ಮೂಲ ಸಚಿವರಾಗಿದ್ದಾರೆ,

ಇವತ್ತಿನವರೆಗೆ ಏನಾಗಿದೆ ಎಂದು ಅಲ್ಲಿಗೆ ಹೋಗಿ ನೋಡಿದ್ದಾರಾ? ಏಕೆಂದರೆ, ಅವಾಗ ಯಡಿಯೂರಪ್ಪನವರು ಹೋಗಿ ನೋಡಿಕೊಂಡು ಅಲ್ಲೆಲ್ಲಾ ಆ ಯೋಜನೆಯನ್ನು ವಿರೋಧ ಮಾಡಿ ಬಂದಿದ್ದರು. ಈಗ ನೀವೇ ಮುಖ್ಯಮಂತ್ರಿ, ನೀವೇ ಜಲಸಂಪನ್ಮೂಲ ಸಚಿವರಿದ್ದಿರಿ, ನೀವೇ ವಿದ್ಯುತ್ ಸಚಿವರಾಗಿದ್ದಾಗ, ಈ ಬಗ್ಗೆ ಏನಾದರೂ ಅಲ್ಲಿಗೆ ಹೋಗಿ ನೋಡಿ ಬಂದಿದ್ದೀರಾ ಅಥವಾ ಏನು ಕ್ರಮ ತೆಗೆದುಕೊಂಡಿದ್ದಿರೆಂಬುದು ಗೊತ್ತಾಗುತ್ತಿಲ್ಲ, ಅಲ್ಲಿ ಈಗ ಪರಿಸ್ಥಿತಿ ಏನಾಗಿದೆ?

ಶ್ರೀ ಕೆ. ಎಸ್. ಈಶ್ವರಪ್ಪ: ನಾನು ಆಗಲೇ ಸ್ಪಷ್ಟವಾಗಿ ಹೇಳಿದ್ದೇನೆ, ಈ ವಿಚಾರದಲ್ಲಿ ನಮ್ಮ ಸರ್ಕಾರ ಯಾವ ಹಿಂದೇಟು ಹಾಕುವ ಪ್ರಶ್ನೆಯೇ ಇಲ್ಲ. ಸನ್ಮಾನಯ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ, ನಾನು, ಅವರು ಆ ಜಾಗಕ್ಕೆ ಹೋಗಿ ಬಂದಿರುವುದು ನಿಜ, ನಾವು ರಾಜ್ಯದ ಹಿತದೃಷ್ಟಿಯಿಂದ ಕಳಕಳಿಯನ್ನು ಇಟ್ಟುಕೊಂಡು ಅಲ್ಲಿಗೆ ಹೋಗಿ ಬಂದಿದ್ದೇವೆ. ಹಾಗಾಗಿ ಈ ವಿಚಾರದಲ್ಲಿ ನಾನು ರಾಜಕಾರಣ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಈಗಿರುವ ಪ್ರಶ್ನೆ ರಾಜ್ಯದ ಹಾಗೂ ರೈತರ ಹಿತದೃಷ್ಟಿಯಿಂದ ಸರ್ವಾನುಮತದ ನಿರ್ಣಯವಾಗಬೇಕಾ, ಯೋಚನೆ ಮಾಡಿ, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕುಳಿತು ಚರ್ಚೆ ಮಾಡಿ ಆ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ನಾವು ತಯಾರಾಗಿದ್ದೇವೆ. ಕೇಂದ್ರಕ್ಕೆ ಸರ್ವಪಕ್ಷದ ನಿಯೋಗವನ್ನು ಕರೆದೊಯ್ಯಬೇಕಾ ಅದಕ್ಕೂ ಕೂಡ ನಾವು ತಯಾರಿದ್ದೇವೆ. ಒಟ್ಟಾರೆ ಕರ್ನಾಟಕದ ಹಿತದೃಷ್ಟಿಯಿಂದ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅವೆಲ್ಲವನ್ನು ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅಲ್ಲಿ ಕೆಲಸ ನಿಂತಿದೆಯಾ ಅಥವಾ ನಡೆಯುತ್ತಿದೆಯಾ?

ಶ್ರೀ ಕೆ. ಎಸ್. ಈಶ್ವರಪ್ಪ: ಕೆಲಸ ನಿಲ್ಲಿಸುವುದಕ್ಕೆ ನಾವ್ಯಾರು? ಇಲ್ಲಿ ಪ್ರಶ್ನೆ ಇರುವುದು, ಇಲ್ಲಿ ಏನು ನಡೆಯುತ್ತಿದೆ ಎಂಬ ಅಂಶಗಳ ಬಗ್ಗೆಯೇ ಕೇಂದ್ರ ಸರ್ಕಾರಕ್ಕೆ ಏನು ತಿಳಿಸಬೇಕೋ ಅದನ್ನು ತಿಳಿಸಿ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವನ್ನು ತೆಗೆದುಕೊಂಡಿದ್ದೇವೆ. ಅಲ್ಲಿ ಕೆಲಸ ನಿಂತಿದೆಯಾ ಇಲ್ಲವಾ ಎನ್ನುವ ಬಗ್ಗೆ ಕೇಂದ್ರ ಸರ್ಕಾರ ಉತ್ತರವನ್ನು ಕೊಡಬೇಕಾಗುತ್ತದೆ. ತಮಿಳುನಾಡು ಸರ್ಕಾರ ಮಾಡುತ್ತಿರುವ ಕೆಲಸದ ಬಗ್ಗೆ ಕೇಂದ್ರ ಸರ್ಕಾರ ಉತ್ತರವನ್ನು ಕೊಡಬೇಕು, ಕೇಂದ್ರ ಸರ್ಕಾರದ ಗಮನಕ್ಕೆ ಪೂರ್ಣವಾಗಿ ಇದನ್ನು ತಂದಿದ್ದೇವೆ.

ಶ್ರೀ ಆರ್. ಧ್ರುವನಾರಾಯಣ: ತಾವು ಮಂತ್ರಿಯಾಗಿರುವವರು ಅಲ್ಲಿಗೆ ಭೇಟಿ ನೀಡಿ ಅಲ್ಲಿ ಏನಾಗಿದೆ ಎಂಬ ವಾಸ್ತವಾಂಶವನ್ನು ಹೇಳಬೇಕು, ಬರೀ ಪತ್ರಿಕೆಯ ಮುಖೇನ ಕೇಂದ್ರಕ್ಕೆ ಪತ್ರವನ್ನು ಬರೆದಿದ್ದೇವೆ ಎಂಬುದನ್ನು ಹೇಳುತ್ತಿದ್ದೀರಿ. ವಿರೋಧ ಪಕ್ಷದಲ್ಲಿದ್ದಾಗ ತಾವು ಬಂದಿದ್ದೀರಾ, ಮಂತ್ರಿಗಳಾದ ಮೇಲೆ ತಾವು ಭೇಟಿ ನೀಡಿ ಅಲ್ಲಿ ಏನು ನಡೆಯುತ್ತಿದೆ ಎಂಬುದನ್ನು ತಾವು ಹೇಳಬೇಕು. ತಾವು, ಆಂಧ್ರ ಸೇರಿದಂತೆ ಇತರೆ ರಾಜ್ಯಗಳಿಗೆ ಕೇಂದ್ರ ಸರ್ಕಾರ ಸಹಾಯ ಮಾಡಿದೆ, ಕರ್ನಾಟಕಕ್ಕೆ ಅನ್ಯಾಯ ಮಾಡಿದೆ ಎಂದು ಹೇಳಿದಿರಿ, ಕೇಂದ್ರದಲ್ಲಿ ಎನ್.ಡಿ.ಎ. ಸರ್ಕಾರವಿರುವಾಗ, ಕರ್ನಾಟಕದಲ್ಲಿ ಎಸ್.ಎಂ. ಕೃಷ್ಣರವರು

ಮುಖ್ಯಮಂತ್ರಿಗಳಾಗಿದ್ದಾಗ ಬರಗಾಲವಿದ್ದಾಗ ಸಂದರ್ಭದಲ್ಲಿ ನಮ್ಮ ರಾಜ್ಯಕ್ಕೆ ಎಷ್ಟು ಅಕ್ಕಿಯನ್ನು ಕೊಟ್ಟರು, ಆಂಧ್ರ ರಾಜ್ಯಕ್ಕೆ ಎಷ್ಟು ಅಕ್ಕಿಯನ್ನು ಕೊಟ್ಟರೆಂಬುದೆಲ್ಲಾ ಗೊತ್ತಿದೆ. ಆಂಧ್ರಕ್ಕೆ ಕೇಂದ್ರ ಸರ್ಕಾರ ಯತೇಚ್ಛವಾಗಿ ಅಕ್ಕಿಯನ್ನು ಕೊಟ್ಟು ಕರ್ನಾಟಕ ರಾಜ್ಯವನ್ನು ಅಂದಿನ ಕೇಂದ್ರ ಸರ್ಕಾರ ನಿರ್ಲಕ್ಷ್ಯ ಮಾಡಿರುವುದು ಎಲ್ಲರಿಗೂ ಗೊತ್ತಿಲ್ಲವೇ? ದಯಮಾಡಿ, ತಾವು ಮಂತ್ರಿಯಾಗಿದ್ದೀರಿ, ಭೇಟಿ ನೀಡಿ ಅಲ್ಲಿ ಏನು ನಡೆಯುತ್ತಿದೆ ಎಂಬ ವಾಸ್ತವಾಂಶವನ್ನು ಸದನಕ್ಕೆ ನೀಡಬೇಕು.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಸಚಿವರು ಉತ್ತರ ಕೊಡುವಾಗ ಈಗ ಕೆಲಸ ಆರಂಭವಾಗಿದೆ, ನಿಲ್ಲಿಸುವುದಕ್ಕೆ ನಾವು ಯಾರು ಎಂಬ ಮಾತನ್ನು ಹೇಳಿದರು. ತಮ್ಮ ಉತ್ತರದ ಎರಡನೇ ಭಾಗದಲ್ಲಿ, "ತಮಿಳುನಾಡು ಸರ್ಕಾರವು ಕೈಗೊಂಡಿರುವ ಕುಡಿಯುವ ನೀರಿನ ಯೋಜನೆಗೆ 1.4 ಟಿ.ಎಂ.ಸಿ. ನೀರನ್ನು ಉಪಯೋಗಿಸಲು ಕೇಂದ್ರ ಸರ್ಕಾರವು ಅಭ್ಯಂತರವಿಲ್ಲವೆಂದು ಹಾಗೂ ಸದರಿ ಯೋಜನೆಗೆ ಬಳಸುವ ನೀರು ಕಾವೇರಿ ನ್ಯಾಯಾಧೀಕರಣವು ಮಧ್ಯಂತರ ಆದೇಶದಲ್ಲಿ ಮಾಡಿರುವ ನೀರಿನ ಪಾಲಿನಲ್ಲಿ ಅಥವಾ ನ್ಯಾಯಾಧೀಕರಣವು ಅಂತಿಮ ಆದೇಶದಲ್ಲಿ ತಮಿಳುನಾಡು ಸರ್ಕಾರಕ್ಕೆ ಮಾಡುವ ನೀರಿನ ಹಂಚಿಕೆ ಪ್ರಮಾಣದೊಳಗೆ ಮಾಡಬೇಕು ಮತ್ತು ಆ ಆದೇಶಗಳ ತೀರ್ಪಿನ ನಿಬಂಧನೆಗಳೊಳಗೆ ಒಳಪಟ್ಟಿರಬೇಕೆಂದು ದಿನಾಂಕ :21-9-1998 ರ ಕೇಂದ್ರ ಸರ್ಕಾರದ ಪತ್ರದಲ್ಲಿ ತಿಳಿಸಿರುತ್ತದೆ" ಎಂದು ಹೇಳಲಾಗಿದೆ, ಇದಕ್ಕೆ ನಿಮ್ಮ ಆಕ್ಷೇಪವೇನು? ಅಲ್ಲಿಗೆ ನೀವು ನೋಡಿಕೊಂಡು ಸುಮ್ಮನೆ ಕುಳಿತಿರುವುದೆಂದು ಅರ್ಥವೇ? ಕೇಂದ್ರ ಸರ್ಕಾರ ಎನ್ ಒ ಸಿ ಕೊಟ್ಟಿದೆ ಎನ್ನುವ ಕಾರಣಕ್ಕೋಸ್ಕರ ನೀವು ಅದಕ್ಕೆ ಏನು ತಕರಾರು ಮಾಡದೆ ಸುಮ್ಮನಿರುವುದೆಂದರೆ, ಅವರು, ಕೇಂದ್ರ ಸರ್ಕಾರದವರು, ನಿಮ್ಮ ಪಾಲಿನ ನೀರನ್ನು ನಿಮ್ಮ ಭಾಗದಲ್ಲಿ ಬಳಸಿಕೊಳ್ಳುವುದಕ್ಕೆ ನೀವು ಏತಕ್ಕೆ ಕೇಳುತ್ತೀರೆಂದು ಹೇಳಿರಬಹುದು, ಅದಕ್ಕೆ ನೀವು ಒಪ್ಪಿದ್ದೀರಾ? ಈ ವಿಚಾರದಲ್ಲಿ ನೀವು ಸರಿಯಾಗಿ ಹೇಳಬೇಕಾಗುತ್ತದೆ, ಇದನ್ನು ಬಿಟ್ಟು ನಿಯೋಗ ತೆಗೆದುಕೊಂಡು ಹೋಗುವುದರಲ್ಲೇನಿದೆ? ನಡೆದುಕೊಂಡು ಹೋಗಲೆಂದು ಹೇಳುವುದಾದರೆ, ನಿಲ್ಲಿಸುವುದಕ್ಕೆ ನಾವು ಯಾರು ಎಂದು ಹೇಳುವುದಾದರೆ, ನಮ್ಮ ನೀರಿನ ಹಕ್ಕನ್ನು ಹೇಗೆ ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ, ದಯಮಾಡಿ ಅದನ್ನು ಸರಿಯಾಗಿ ತಿಳಿಸಿ.

ಶ್ರೀ ಕರಡಿ ಸಂಗಣ್ಣ : ನೀಡಿರುವ ಉತ್ತರದಲ್ಲಿ, ತಮಿಳುನಾಡು ರಾಜ್ಯದ ಮುಖ್ಯ ಕಾರ್ಯದರ್ಶಿಗಳಿಗೆ ದಿ.27-3-2008 ರಂದು ರಾಜ್ಯದ ಮುಖ್ಯ ಕಾರ್ಯದರ್ಶಿಗಳು ಬರೆದಿರುವ ಪತ್ರದಲ್ಲಿ ಸದರಿ ಯೋಜನೆಯ ಪ್ರಸ್ತಾಪವನ್ನು ಕಾವೇರಿ ನ್ಯಾಯಾಧೀಕರಣದ ಮುಂದೆ ತಮಿಳುನಾಡು ರಾಜ್ಯವು ಪ್ರಸ್ತಾಪಿಸಿಲ್ಲದಿರುವುದರಿಂದ, ಈ ಯೋಜನೆಗೆ ಕೇಂದ್ರ ಸರ್ಕಾರವು ನೀಡಿರುವ ನಿರಪೇಕ್ಷಣಾ ಪತ್ರವನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿ, ಯೋಜನೆಯನ್ನು ಮುಂದುವರೆಸದಂತೆ ಕೋರಲಾಗಿದೆ ಎಂದು ಕೊಟ್ಟಿದ್ದಾರೆ. ಅಂದರೆ ಇದನ್ನು ನಿಲ್ಲಿಸುವುದಕ್ಕೆ ರಾಜ್ಯ ಸರ್ಕಾರದವರದು ಏನೂ ಪಾತ್ರವೇ ಇಲ್ಲವೆಂದಾಯಿತು. ತಮಿಳುನಾಡಿನವರು ಕಾವೇರಿ ಪ್ರಾಧಿಕಾರದ ಮುಂದೆ ಮನವಿಯನ್ನು ಸಲ್ಲಿಸಿಲ್ಲವೆಂದು ಅವರು ಹೇಳಿದ್ದು.

11-30 A.M.

ಶ್ರೀ ಕೆ. ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು) : ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು ಸರ್ವಾನುಮತದಿಂದ ನೀವು ನಿರ್ಣಯ ಮಾಡುತ್ತೀರಾ ಎನ್ನುವಂತಹ ಪ್ರಶ್ನೆ ಏನು ಕೇಳಿದರು, ಎರಡನೇ ಪ್ರಶ್ನೆ ಅವರು ಕೇಳಿರುವಂಥದ್ದು, ಸರ್ವ ಪಕ್ಷಗಳ ನಿಯೋಗವನ್ನು ತೆಗೆದುಕೊಂಡು ಹೋಗುವುದಕ್ಕೆ ನೀವು ತಯಾರಿದ್ದೀರಾ ಎಂದು ಪ್ರಶ್ನೆ ಕೇಳಿದ್ದಕ್ಕೆ, ರಾಜ್ಯದ ಹಿತದೃಷ್ಟಿಯಿಂದ ಏನು ಬೇಕಾದರೂ ಮಾಡುವುದಕ್ಕೆ ನಾವು ತಯಾರಿದ್ದೇವೆಂದು ಹೇಳಿದ್ದೇವೆ ವಿನಃ ನಾವಾಗಿ ನಾವು ಹೋಗುತ್ತೇವೆ ಎನ್ನುವಂತಹ ಮಾತನ್ನು ಹೇಳಲಿಲ್ಲ. ಇದನ್ನು ನಾನು ನಿಮಗೆ clarify ಮಾಡುವುದಕ್ಕೆ ಇಷ್ಟಪಡುತ್ತೇನೆ. ಈ ಸದನ ಏನು ಅಪೇಕ್ಷೆಪಡುತ್ತದೆ, ಅದನ್ನು ಮಾಡುವುದಕ್ಕೆ ನಾವು ತಯಾರಿದ್ದೇವೆ. ಇದು ಮೊದಲನೆಯದು. ಎರಡನೆಯದು ನಾನು ಏನು ಹೇಳುತ್ತೇನೆಂದರೆ,....

ಡಾ|| ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಸದನದ ಅಪೇಕ್ಷೆಯ ಪ್ರಶ್ನೆ ಅಲ್ಲ. ಇಡೀ ರಾಜ್ಯದ ಬಗ್ಗೆ ನಿಮ್ಮ ಸರ್ಕಾರದ ನಿಲುವನ್ನು ಹೇಳಬೇಕು.

ಅಧ್ಯಕ್ಷರು : ತಾವು ಏನು ಕೇಳಬೇಕು, ಅದನ್ನು specific ಆಗಿ ಕೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ, ತಾವು ವಿಸಿಟ್ ಮಾಡಿದ್ದೀರಿ. ಜಲಸಂಪನ್ಮೂಲ ಸಚಿವರು ಮತ್ತು ವಿದ್ಯುಚ್ಛಕ್ತಿ ಸಚಿವರು ನೀವೇ ಇದ್ದಾಗ ಅಲ್ಲಿ ಏನು ಪರಿಸ್ಥಿತಿ ಇದೆ, ಎಂದು ಹೋಗಿ ನೋಡಿದ್ದೀರಾ? ಕೇಳಿದ್ದೀರಾ? ಕೇಂದ್ರ ಸರ್ಕಾರದವರು ಅನುಮತಿ ಕೊಟ್ಟಿದ್ದಾರೆ, ಅವರು ಮಾಡುತ್ತಾರೆಂದರೆ ಏನು ಅರ್ಥ?

ಶ್ರೀ ಕೆ. ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೇ, ಎರಡನೆಯದು, ಹೊಗೇನಕಲ್ ಯೋಜನೆ ಆರಂಭ ಮಾಡುವುದಕ್ಕಿಂತ ಮುಂಚೆ ಕೇಂದ್ರ ಸರ್ಕಾರ ತಮಿಳುನಾಡಿಗೆ ಏನು ನೀರಿನ ಹಂಚಿಕೆ ಮಾಡಿತ್ತು, ಆ ಹಂಚಿಕೆ ಮಾಡಿಕೊಳ್ಳುವುದಕ್ಕೆ ಅವರಿಗೆ ಅವಕಾಶವಿದೆ ಎನ್ನುವಂತಹ ಅಂಶ ಮಧ್ಯಂತರ ತೀರ್ಪಿನ ಮುಂಚೆ ಕೊಟ್ಟಿದ್ದು. ಅಂತಿಮ ತೀರ್ಪಿನಿಂದ ಅಲ್ಲ. ಅಂತಿಮ ತೀರ್ಪು ಬಂದ ನಂತರ ಅವರು ಈ ಸಮಸ್ಯೆಯನ್ನು ಪ್ರಾರಂಭ ಮಾಡಿದ್ದಾರೆ. ಹೀಗಾಗಿ ಈ ಅಂಶವನ್ನು ನಾವು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಹಾಗೂ ಪ್ರಧಾನ ಮಂತ್ರಿಗಳಿಗೆ ಮತ್ತು ಸಂಬಂಧಪಟ್ಟ ಎಲ್ಲಾ ವ್ಯಕ್ತಿಗಳಿಗೆ ಅವರ ಗಮನಕ್ಕೆ ತಂದಿದ್ದೇವೆ. ತಂದಾದ ನಂತರ ಇದನ್ನು ನಿಲ್ಲಿಸಬೇಕು ಎನ್ನುವಂತಹ ಅಂಶದ ಬಗ್ಗೆ ಕೂಡ ನಾವು ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ. ಹೀಗಾಗಿ ಕೇಂದ್ರದ ಸದ್ಯದ ಪರಿಸ್ಥಿತಿಯಲ್ಲಿ ತಮಿಳುನಾಡಿನ ಬೆಂಬಲ ಬೇಕು ಎನ್ನುವುದಕ್ಕೋಸ್ಕರ ಅವರು ಆಡುತ್ತಿರುವ ಆಟದ ಬಗ್ಗೆ ನಾನು ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಈಶ್ವರಪ್ಪನವರೇ ನಿಮ್ಮ ಉತ್ತರದಲ್ಲಿ ರಾಜಕೀಯ ಬೆರೆಸುವುದಕ್ಕೆ ಹೋಗಬೇಡಿ. ತಮಿಳುನಾಡಿನವರು ಕೇಂದ್ರ ಸರ್ಕಾರಕ್ಕೆ ಬೆಂಬಲ ಕೊಡುತ್ತಿದ್ದಾರೆ ಎನ್ನುವ ಕಾರಣಕ್ಕೋಸ್ಕರವಾಗಿ ಎನ್ನುವ ಪದ ಬಳಸುವುದು ಸರಿಯಿಲ್ಲ. ಏಕೆಂದರೆ ನೀವು, ಮಾನ್ಯ

ಯಡಿಯೂರಪ್ಪನವರು ಚುನಾವಣೆ ನಡೆಯುತ್ತಿದ್ದಂತಹ ಸಂದರ್ಭದಲ್ಲಿ ಹೊಗೇನಕಲ್‌ಗೆ ಹೋಗಿ ನೋಡಿ ಯಾವ ಕಾರಣಕ್ಕೂ ಕೂಡ ಇದನ್ನು ಮಾಡುವುದಕ್ಕೆ ಬಿಡುವುದಿಲ್ಲ ಎನ್ನುವಂತಹ ಹೇಳಿಕೆಗಳನ್ನು ಕೊಟ್ಟಿದ್ದೀರಿ. ನೀವೇ ಈಗ ಅಧಿಕಾರಕ್ಕೆ ಬಂದಿದ್ದೀರಿ. ಅದಾದ ಮೇಲೆ ನೀವು ಒಂದು ಸ್ಟೇಟ್‌ಮೆಂಟ್ ಕೊಡುವುದು ಬಿಟ್ಟರೆ, ಅಲ್ಲಿ ಹೋಗಿ ಏನಾಗುತ್ತಿದೆ ಎಂದು ನೋಡಿಲ್ಲ. ಇದು ಒಂದನೆಯದು. ಎರಡನೆಯದಾಗಿ, ನೀವೇ ಹೇಳಿದ ಪ್ರಕಾರ ಅದು ನಡೆದುಕೊಂಡು ಹೋಗುತ್ತಿದೆ ಎಂದು ಕೂಡ ಹೇಳುತ್ತೀರಿ. ನಡೆದುಕೊಂಡು ಹೋಗುತ್ತಿದೆ ಎಂದು ನಿಮ್ಮ ಗಮನಕ್ಕೆ ಬಂದಿದ್ದರೂ ಕೂಡ, ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದು 40 ರಿಂದ 50 ದಿನಗಳಾದರೂ ಕೂಡ, ನೀವು ಸುಮ್ಮನೆ ಕುಳಿತಿದ್ದೀರಿ. ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕತಕ್ಕಂಥದ್ದಕ್ಕೆ ನೀವು ಏನು ಉತ್ತರಗಳನ್ನು ಕೊಟ್ಟಿದ್ದೀರಿ, ನಾವು ಪತ್ರ ಬರೆದಿದ್ದೇವೆ, ನೀರಿನ ವ್ಯಾಜ್ಯ ಸುಪ್ರೀಂ ಕೋರ್ಟಿನ ಟ್ರಿಬ್ಯುನಲ್ ಮುಂದಿರುವುದರಿಂದ ಯಾವುದೇ ಕಾರಣಕ್ಕೆ ಇದನ್ನು ಮಾಡಲಿಕ್ಕೆ ಬಿಡಬಾರದು ಎಂದು ಪತ್ರ ಬರೆದಿದ್ದೇವೆ. ಮುಂದುವರಿಸಲಿಕ್ಕೆ ನಮಗೆ ಒಪ್ಪಿಗೆ ಇಲ್ಲ, ಎಂದು ಹೇಳಿದ್ದೇವೆ. ನಾವು ಸರ್ಕಾರದಲ್ಲಿ ಏನು ಮಾಡಬೇಕು ಅದನ್ನು ಮಾಡಿದ್ದೇವೆಂದು ಹೇಳಿ ಕೈ ಕಟ್ಟಿಕೊಂಡು ಕುಳಿತುಕೊಂಡರೆ ಆಗುವುದಿಲ್ಲ. ಕಳಸಾ ಬಂಡೂರಿ ನಾಲೆಯಿಂದ ನಮಗೆ ಇವತ್ತಿನವರೆಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕಾಗುತ್ತಿಲ್ಲ. ಸುಪ್ರೀಂಕೋರ್ಟಿನ ಮುಂದಿದ್ದರೂ ಕೂಡ ಅವರ ಪಾಡಿಗೆ ಅವರು ಮಾಡಿಕೊಂಡು ಹೋಗುತ್ತಿದ್ದಾರೆ. ಅದಕ್ಕೋಸ್ಕರ ಕೇಂದ್ರ ಸರ್ಕಾರದ ಮೇಲೆ ಮತ್ತು ಕೇಂದ್ರ ಜಲ ಸಂಪನ್ಮೂಲ ಇಲಾಖೆ ಮೇಲೆ ಒತ್ತಡ ಹಾಕಲಿಕ್ಕೆ ನೀವು ಕ್ರಮ ತೆಗೆದುಕೊಳ್ಳುವುದರಲ್ಲಿ ವಿಫಲರಾಗಿದ್ದೀರಿ ಎಂದು ಕಳೆದ 40 ದಿವಸಗಳ ಅವಧಿಯಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತದೆ. ಅದನ್ನು ಅವರು ಉತ್ತರ ಬಯಸುತ್ತಿದ್ದಾರೆ. ನೀವು ಸುಮ್ಮನೆ ಕುಳಿತಿದ್ದೀರಿ ಎಂದು ಅವರು ಹೇಳುತ್ತಿರುವುದು. ಅಲ್ಲಿ ಕೆಲಸ ನಡೆಯುತ್ತಿದೆ, ನೀವು ಸುಮ್ಮನೆ ಕುಳಿತಿದ್ದೀರಿ ಏನೂ ಮಾಡುತ್ತಿಲ್ಲ, ಚುನಾವಣೆ ಸಮಯದಲ್ಲಿ ಬಹಳ ಆಕ್ರೋಶದಿಂದ ಮತ್ತು ಆವೇಶದಿಂದ ಮಾತನಾಡಿದ್ದೀರಿ. ಅಲ್ಲೆಲ್ಲಾ ಕೆಳಗಡೆ ಬೋಟ್‌ನಲ್ಲಿ ಎಲ್ಲಾ ಹೋಗಿ ತಿರುಗಾಡಿಕೊಂಡು ಬಂದಿದ್ದೀರಿ. ಈಗ ಅದನ್ನು ನಿಲ್ಲಿಸುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕು. ಮುಂದೆ ಸುಪ್ರೀಂಕೋರ್ಟಿನಲ್ಲಿ ಏನಾಗುತ್ತದೆ, ಟ್ರಿಬ್ಯುನಲ್‌ನಲ್ಲಿ ಈ ಸ್ಟೇಜ್‌ನಲ್ಲಿ ರಿಮೈಂಡ್ ಆಗುತ್ತದೆ, ಏನಾಗುತ್ತದೆ ಗೊತ್ತಿಲ್ಲ ನಮಗೆ. ಇದು ಸುಪ್ರೀಂಕೋರ್ಟಿನ ಮುಂದೆ ಪೆಂಡಿಂಗ್ ಇದೆ. ಪೆಂಡಿಂಗ್ ಇರುವಾಗ ಅವರು ಕೆಲಸ ಪ್ರಾರಂಭ ಮಾಡಿದ್ದಾರೆ. ಅವರು NOC ತೆಗೆದುಕೊಂಡಿರಬಹುದು. ಆದರೆ ಅವರು ಅದು ಮಾಡುವುದು ಸರಿಯಲ್ಲ. ಸರ್ಕಾರದಿಂದ ಕೂಡ ಅದು ಸರಿಯಿಲ್ಲವೆಂದು ಪತ್ರ ಬರೆದಿದ್ದೀರಿ. ಅಂದ ಮೇಲೆ ಅದನ್ನು ಪ್ರಾಮಾಣಿಕವಾಗಿ ನಿಲ್ಲಿಸತಕ್ಕಂತಹ ಪ್ರಯತ್ನಗಳನ್ನು ಮಾಡಬೇಕು. ಅದು ಮಾಡುತ್ತಿಲ್ಲ ಎನ್ನುವಂಥದ್ದು ಇವರ ಆರೋಪ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ನಾನು ಪ್ರಧಾನಿಯವರನ್ನು ಭೇಟಿ ಮಾಡಿದೆ. ಆ ಸಂದರ್ಭದಲ್ಲಿ ಅವರು ಒಂದು ಮಾತನ್ನು ಹೇಳಿದರು. ಮಾನ್ಯ ಯಡಿಯೂರಪ್ಪನವರೇ, ಈ ನದಿ ನೀರಿನ ವಿವಾದದ ಪ್ರಶ್ನೆ ಬಂದಾಗ, ಕುಡಿಯುವ ನೀರಿನ ವಿಷಯಗಳು ಬಂದಾಗ ಆಯಾ ರಾಜ್ಯಗಳು ಅವರಿಗೆ ಸೀಮಿತವಾಗಿ ಮಾತನಾಡುತ್ತಾರೆ ಹೊರತು ಇಡೀ ದೇಶವನ್ನು ಕಣ್ಣು

ಮುಂದೆ ಇಟ್ಟು ಮಾತನಾಡುತ್ತಿಲ್ಲ. ಇದನ್ನು ಸ್ವಲ್ಪ ಚಿಂತನೆ ಮಾಡಿ ಎನ್ನುವಂತಹ ಸಲಹೆಯನ್ನು ಕೊಟ್ಟರು. ಅದಕ್ಕೆ ನಾನು ಹೇಳಿದೆ, ಇದಕ್ಕೆ ಸಂಬಂಧಪಟ್ಟ ಎಲ್ಲಾ ಮುಖ್ಯಮಂತ್ರಿಗಳ ಸಭೆಯನ್ನು ಕರೆಯಿರಿ. ನಾವು ದೇಶ ಒಂದು ಎಂದು ಯೋಚನೆ ಮಾಡಬೇಕಾಗುತ್ತದೆ. ಕುಡಿಯುವ ನೀರಿನ ವಿಷಯ ಬಂದಾಗ ಕಳಸಾ ಬಂಡೂರಿ ಯೋಜನೆ ಬಗ್ಗೆ ಕುಡಿಯುವ ನೀರಿಗಾಗಿ ಅಡ್ಡಿ ಆತಂಕಗಳನ್ನು ಮಾಡಬಾರದು ಎಂದು ಸುಪ್ರೀಂ ಕೋರ್ಟಿನ ಆದೇಶವಿದ್ದರೂ ಅವರು ಅಡ್ಡಿ ಮಾಡುತ್ತಾರೆ. ನಮಗೆ ಮಾತ್ರ ಇದನ್ನು ಹೇಳುತ್ತೀರಿ. ಎಲ್ಲರನ್ನೂ ಕರೆಯಿರಿ ಚರ್ಚೆ ಮಾಡೋಣ. ನಾವು ಯಾವುದೇ ವಿಷಯದಲ್ಲಿ ಬಿಚ್ಚು ಮನಸ್ಸಿನಿಂದ ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದೇವೆಂದು ಹೇಳಿದ್ದೇವೆ. ಇದು ಮೊದಲನೆಯದು. ಎರಡನೆಯದು, ಹೊಗೇನಕಲ್ ವಿಷಯದಲ್ಲಿ, ಅಂತರ ರಾಜ್ಯಕ್ಕೆ ಸಂಬಂಧಪಟ್ಟಂತಹ ಇಂತಹ ವಿಷಯಗಳಲ್ಲಿ ಯಾವುದೇ ರಾಜ್ಯ ಅದು ಕರ್ನಾಟಕ ಇರಬಹುದು, ಅಥವಾ ಬೇರೆ ಯಾವುದೇ ರಾಜ್ಯ ಇರಬಹುದು. ಕೇಂದ್ರದ ಅನುಮತಿ ಇಲ್ಲದೆ ಏಕಾ ಏಕಿ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಬರುವುದಿಲ್ಲ. ಇದು ನಮಗೆ ನಿಮಗೆಲ್ಲಾ ಗೊತ್ತಿರುವಂತಹ ಸಂಗತಿ. ಅದಕ್ಕೆ ನಾನು ನಿಮಗೆ ಸಲಹೆ ಕೊಡುವಂಥದ್ದು, ಈ ವಿಷಯ ಮತ್ತು ಇನ್ನೂ ಅನೇಕ ವಿಷಯಗಳಿವೆ ಕಳಸಾ ಬಂಡೂರಿ ಇರಬಹುದು, ಹೊಗೇನಕಲ್ ಬಗ್ಗೆ ಇರಬಹುದು, ಬರಗಾಲದ ವಾತಾವರಣದ ಪ್ರಶ್ನೆ ಇರಬಹುದು, ರಸಗೊಬ್ಬರದ ಸಮಸ್ಯೆ ಇರಬಹುದು, ಇನ್ನೊಂದು ಮೂರು ನಾಲ್ಕು ದಿವಸಗಳಲ್ಲಿ ನಿಮ್ಮ ಎಲ್ಲಾ ಪ್ರತಿಪಕ್ಷದ ನಾಯಕರ ಸಭೆಯನ್ನು ಕರೆಯುತ್ತೇನೆ. ಹೊಗೇನಕಲ್ ಬಗ್ಗೆ ಸಹ ನಮ್ಮ ಲೀಗಲ್ experts ಕರೆಯೋಣ. ನಾನು ಆಗಲೇ ಸಮಾಲೋಚನೆ ಮಾಡಿದ್ದೇನೆ. ಸಮಾಲೋಚನೆ ಮಾಡಿ ಸರ್ವಾನುಮತದಿಂದ ಈ ನಾಡಿನ ನೆಲ, ಜಲ ಮತ್ತು ಭಾಷೆಯ ಪ್ರಶ್ನೆ ಬಂದಾಗ ಯಾವುದೇ ಭಿನ್ನಾಭಿಪ್ರಾಯ ಇಲ್ಲದೇ, ನಿಮ್ಮೆಲ್ಲರ ಸಲಹೆ ತೆಗೆದುಕೊಂಡು ನಾನು ಕೆಲಸ ಮಾಡುವುದಕ್ಕೆ ಸಿದ್ಧನಿದ್ದೇನೆ. ತಾವು ಹೇಳಿದಾಗ ಪ್ರಧಾನಿಯವರನ್ನು ಭೇಟಿ ಮಾಡೋಣ. ಇನ್ನೊಂದು ಮೂರು ನಾಲ್ಕು ದಿವಸಗಳಲ್ಲಿ ಈ ವಿಷಯದಲ್ಲಿ ಸರ್ವ ಪಕ್ಷಗಳ ಸಭೆಯನ್ನು ಕರೆಯುತ್ತೇನೆ. ಚರ್ಚೆ ಮಾಡೋಣ. ಇನ್ನು ವ್ಯಾಪಕವಾದ ಚರ್ಚೆ ಮಾಡಬೇಕೆಂದರೆ ನನ್ನದೇನೂ ಅಭ್ಯಂತರವಿಲ್ಲ. ಲೀಗಲ್ experts ಜೊತೆ ಕುಳಿತುಕೊಂಡು ಈ ಸಮಸ್ಯೆಗಳನ್ನು ಹೇಗೆ ಬಗೆಹರಿಸಬೇಕು, ಈ ಅನ್ಯೋನ್ಯ ಸಂಬಂಧಗಳನ್ನು ಉಳಿಸಿಕೊಳ್ಳುವುದು ಹೇಗೆ, ಇವೆರಡರ ಬಗ್ಗೆಯೂ ಚರ್ಚೆ ಮಾಡೋಣ. ಮಾನ್ಯ ಸಿದ್ಧರಾಮಯ್ಯನವರು ಉಪ ಮುಖ್ಯಮಂತ್ರಿಗಳಾಗಿದ್ದವರು ಹಿರಿಯ ಮುಖಂಡರಿದ್ದಾರೆ, ಮಾನ್ಯ ವಿರೋಧ ಪಕ್ಷದ ನಾಯಕರು ಎಲ್ಲರೂ ಸೇರಿ ಸರ್ವಾನುಮತದಿಂದ ಒಂದು ತೀರ್ಮಾನ ತೆಗೆದುಕೊಳ್ಳೋಣ. ಮಾನ್ಯ ಕುಮಾರಸ್ವಾಮಿಯವರನ್ನು ಎಲ್ಲರನ್ನೂ ನಾನು ಕರೆಯುತ್ತೇನೆ.

ಅಧ್ಯಕ್ಷರು : ಎಲ್ಲರನ್ನು ಕರೆದು ಮಾತನಾಡುತ್ತೇನೆಂದು ಹೇಳಿ conclude ಮಾಡಿದ್ದಾರೆ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಒಂದು ಸಲಹೆ ಇದೆ, ಹೇಗೆ ತಮಿಳುನಾಡಿನವರ ತಂತ್ರಕ್ಕೆ ಪ್ರತಿ ತಂತ್ರವನ್ನು ನಾವು ರೂಪಿಸಬೇಕಾಗುತ್ತದೆ.

ಅಧ್ಯಕ್ಷರು : ಎಲ್ಲರನ್ನು ಕರೆದಾಗ ಅದರ ಬಗ್ಗೆ ಮಾತನಾಡಿ.

ಶ್ರೀ ಟಿ. ಬಿ. ಜಯಚಂದ್ರ : ಇದೇ ರೀತಿಯಾಗಿ ಕುಡಿಯುವ ನೀರಿನ ಯೋಜನೆಗಳು ರಾಜ್ಯದಲ್ಲಿ

ಸಾಕಷ್ಟು ನಿಂತು ಹೋಗಿವೆ. ಇದೇ ನಾರ್ಮ್ ಅನ್ನು ಅಪ್ಲೈ ಮಾಡಿ ನೀವು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ನೀವು ಕೆಲಸ ಪ್ರಾರಂಭ ಮಾಡತಕ್ಕಂತಹ ಕೆಲಸವನ್ನು ಮಾಡುತ್ತೀರಾ?

ಅಧ್ಯಕ್ಷರು : ಈ ಪ್ರಶ್ನೆ ಬೇಡ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿನ ಬಗ್ಗೆ ನಮ್ಮ ರಾಜ್ಯದಲ್ಲಿ ಹಿಂದಿನ ನೀರಾವರಿ ಕಾರ್ಯದರ್ಶಿಗಳು ಯಾವುದೇ ಕುಡಿಯುವ ನೀರನ್ನು ತಮಿಳುನಾಡಿನಿಂದ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದಾರೆ. ಅಂತಹ ಸನ್ನಿವೇಶದಲ್ಲಿ ರಾಜ್ಯ ಸರ್ಕಾರ ಇವತ್ತಿನವರೆಗೆ ಈ ಸರ್ಕಾರ ಬಂದು 40 ದಿವಸಗಳಲ್ಲಿ ಕೇಂದ್ರ ಸರ್ಕಾರದ ಜೊತೆ ಯಾವುದೇ ಪತ್ರ ವ್ಯವಹಾರ ಮಾಡಿಲ್ಲವೆನ್ನುವುದು ಮೇಲಿನಿಂದಲೇ ಕಾಣುತ್ತಿದೆ. ಈ ರಾಜ್ಯದ ನದಿ ನೀರಿನ ಬಗ್ಗೆ ರಾಜ್ಯ ಸರ್ಕಾರಕ್ಕೆ ಎಷ್ಟು ಕಾಳಜಿ ಇದೆ ಎನ್ನುವುದು ಅವರ ಉತ್ತರದಲ್ಲಿಯೇ ಗೊತ್ತಾಗುತ್ತಿದೆ. ತಮಿಳುನಾಡಿನವರು ನಮ್ಮ ರಾಜ್ಯದ ಕುಡಿಯುವ ನೀರಿನ ಬಗ್ಗೆ objection ಮಾಡುತ್ತಾರೆಂದರೆ, ಆ ರಾಜ್ಯದ ಬಗ್ಗೆ ನಮ್ಮವರು ಯಾರೂ objection ಮಾಡುವುದಿಲ್ಲವೆಂದರೆ, ಇದಕ್ಕೆ ಹಿಂದಿನಿಂದ ಸಹಮತಿ ಇದೆ ಎನ್ನುವುದು ಕಾಣುತ್ತಿದೆ.

ಭದ್ರಾವತಿ ಕ್ಷೇತ್ರದ ಆಧುನೀಕರಣ ನೀರಾವರಿಗಾಗಿ ಡ್ಯಾಂ ದುರಸ್ಥಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 4 : (2)

ಸದಸ್ಯರ ಹೆಸರು : ಶ್ರೀ ಸಂಗಮೇಶ್ವರ. ಬಿ. ಕೆ. (ಭದ್ರಾವತಿ)

ಉತ್ತರಿಸುವ ಸಚಿವರು : ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)

ಕ್ರ.ಸಂ.	ಪ್ರಶ್ನೆ	ಉತ್ತರಗಳು
ಅ	ಭದ್ರಾವತಿ ಕ್ಷೇತ್ರದ ಭದ್ರಾ ಡ್ಯಾಮ್ ರಿಪೇರಿಗೆ ಹಾಗೂ ಆಧುನೀಕರಣಕ್ಕೆ ಕಳೆದ ವರ್ಷ ರೂ.935 ಕೋಟಿ ಹಣ ಬಿಡುಗಡೆಯಾಗಿ ಪ್ರಾರಂಭವಾದ ಕಾಮಗಾರಿಯು ಪೂರ್ಣಗೊಂಡಿದೆಯೇ ಅಥವಾ ಯಾವ ಹಂತದಲ್ಲಿದೆ?	ಭದ್ರಾ ಡ್ಯಾಮ್ ರಿಪೇರಿಗೆ ಸಂಬಂಧಿಸಿದಂತೆ, ಡ್ಯಾಮ್‌ನ ಸ್ಲೂಯಿಸ್ ಗೇಟ್‌ನಲ್ಲಿ ಉಂಟಾಗಿರುವ ನೀರಿನ ಸೋರಿಕೆಯನ್ನು ತಡೆ ಹಿಡಿಯಲು ರೂ.34.98 ಲಕ್ಷಗಳ ಅಂದಾಜುಪಟ್ಟಿಗೆ ಮಂಜೂ ರಾತಿ ನೀಡಲಾಗಿದ್ದು, ಇದುವರೆಗೆ ರೂ.20.64 ಲಕ್ಷಗಳನ್ನು ಗುತ್ತಿಗೆದಾರರಿಗೆ ಪಾವತಿಸಲಾಗಿದೆ ಹಾಗೂ ಡ್ಯಾಮ್ ಕಟ್ಟಡಕ್ಕೆ ಇಪಾಕ್ಸಿ (epoxy) ಪಾಯಿಂಟಿಂಗ್ ಮಾಡಲು ರೂ.46.00 ಲಕ್ಷಗಳ ಅಂದಾಜುಪಟ್ಟಿಗೆ ಮಂಜೂರಾತಿ ನೀಡಲಾಗಿದ್ದು, ಇದುವರೆಗೆ ರೂ.14.92 ಲಕ್ಷಗಳ ಬಿಲ್ಲನ್ನು ತಯಾರಿಸಲಾಗಿದ್ದು, ಗುತ್ತಿಗೆದಾರರಿಗೆ ಇನ್ನೂ ಪಾವತಿಸಬೇಕಿದೆ. ಈ ಕಾಮಗಾರಿಗಳನ್ನು ಲೆಕ್ಕ ಶೀರ್ಷಿಕೆ 4701 ರಲ್ಲಿ ಅಣೆಕಟ್ಟು ಸುರಕ್ಷತಾ ಕಾಮಗಾರಿಗಳ ಅಡಿಯಲ್ಲಿ ನೀಡಲಾಗಿರುವ ಅನುದಾನದ ಅಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಈ ಕಾಮಗಾರಿಗಳು ಪ್ರಗತಿಯಲ್ಲಿವೆ.